Govt. of Karnataka [C.R.P. 67

Deposition Sheets (R.P. No. 57) Form No. 4 (Criminal)

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ, ಶಿರಾ**

**ಪ್ರಕರಣ ಸಂಖ್ಯೆ: 3871/2022**

| | | | |
|---|---|---|---|
| ದಿನಾಂಕ: 27-05-2025 ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಭೋದಿಸಲಾಯಿತು. | | | |
| ಸಿಡಬ್ಲ್ಯೂ : | 01 | ಪಿಡಬ್ಲ್ಯೂ | 01 |
| ಹೆಸರು | ಶಿವಣ್ಣ | | |
| ತಂದೆ / ಗಂಡನ ಹೆಸರು | ದೊಡ್ಡಯ್ಯ | | |
| ವಯಸ್ಸು | 55 ವರ್ಷ | | |
| ಉದ್ಯೋಗ | ವ್ಯವಸಾಯ | | |
| ವಾಸ | ಕೆಂಪನಹಳ್ಳಿ , ಶಿರಾ ತಾ: | | |

**ಮುಖ್ಯ ವಿಚಾರಣೆ: ಎ ಪಿ ಪಿ ರವರಿಂದ:**

ಈ ಪ್ರಕರಣದಲ್ಲಿ ಮೃತಪಟ್ಟ ವ್ಯಕ್ತಿಯು ನನ್ನ ಮಗ. ಆರೋಪಿಯನ್ನು ನಾನು ನೋಡಿರುವುದಿಲ್ಲ. ದಿ:06.02.2022 ರಂದು ದೊಡ್ಡ ಆಲದ ಮರದ ಗ್ರಾಮದ ಬಳಿ ನನ್ನ ಮಗನಿಗೆ ಆದ ಅಪಘಾತವನ್ನು ನಾನು ನೋಡಿಲ್ಲ. ಅಪಪಘಾತಪಡಿಸಿದ ವಾಹನದ ಸಂಖ್ಯೆ ನನಗೆ ಗೊತ್ತಿಲ್ಲ. ಅಪಘಾತ ಯಾರ ತಪ್ಪಿ ನಿಂದ ಆಗಿದೆ ಎಂದು ನನಗೆ ಗೊತ್ತಿಲ್ಲ. ಅಪಪಘಾತದ ವಿಚಾರವಾಗಿ ಪೋಲೀಸ್ ರ,ಾಣೆಗೆ ಹೋದಾಗ ಪೋಲೀಸರು ದಾಖಲಗಳಿಗೆ ಸಹಿಯನ್ನು ಪಡೆದಿರುತ್ತಾರೆ. ಈ ಹಂತದಲ್ಲಿ ಸಾಕ್ಷಿಗೆ ದೂರನ್ನು ತೋರಿಸಲಾಗಿ ಅದನ್ನು ನಿಪಿ.1 ಎಂದು, ಅದರಲ್ಲಿರುವ ಅವರ ಸಹಿಯನ್ನು ನಿಪಿ- 1 ಎ ಎಂದು ಗುರುತಿಸಲಾಯಿತು. ಸಾಕ್ಷಿಯು ಅದರಲ್ಲಿರುವ ಅಂಶಗಳು ಅಲ್ಲಗಳೆದಿರುತ್ತಾರೆ. ಪೊಲೀಸರಿಗೆ ಯಾವುದೇ ರೀತಿಯ ಹೇಳಿಕೆಯನ್ನು ನೀಡಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಎಪಿಪಿ ರವರು ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ. ಸಾಕ್ಷಿಯನ್ನು ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ ಎಪಿಪಿ ರವರಿಂದಃ**

ದಿಃ 06.02.2022 ರಂದು ನನ್ನ ಮಗ ಚಾಸಾ.2 ರವರೊಂದಿಗೆ ದೊಡ್ಡಆಲದ ಮರದ ಗ್ರಾಮದ ಬಳಿ ಪಲ್ಲವಿ ಡಾಬಾ ಗೆ ಹೋಗಿದ್ದರು ಎಂದರೆ ಸರಿಯಲ್ಲ. ಅದೇ ದಿನ ಸಂಜೆ 5.20 ರ ಸಮಯದಲ್ಲಿ ಡಾಬಾದ ಮುಂಭಾಗ ನನ್ನ ಮಗ ಕೆಎ-504 ಡಬ್ಲೂ - 2665 ದ್ವಿಚಕ್ರವಾಹನದಲ್ಲಿ ಬರುತ್ತಿದ್ದಾಗ ಆರೋಪಿಯು ಕೆಎ-06-ಎನ್-4243 ಡಸ್ಟರ್ ಕಾರನ್ನು ಅತೀವೇಗವಾಗಿ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಅಪಘಾತಪಡಿಸಿದರು ಎಂದರೆ ಸರಿಯಲ್ಲ. ಸದರಿ ಅಪಘಾತದಲ್ಲಿ ಆದ ಗಾಯಗಳಿಂದ ನನ್ನ ಮಗ ಮೃತಪಟ್ಟಿದ್ದಾನೆ ಎಂದರೆ ಸರಿಯಲ್ಲ. ಅಪಘಾತದ ವಿಚಾರವಾಗಿ ಪೋಲೀಸ್ ಠಾಣೆಯಲ್ಲಿ ದೂರು ನೀಡಿದ್ದೇನೆ ಎಂದರೆ ಸರಿಯಲ್ಲ. ದಿಃ08.03.2022 ರಂದು ಪೋಲೀಸರಿಗೆ ಮರು ಹೇಳಿಕೆಯನ್ನು ನೀಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ಹೇಳಿಕೆಯನ್ನು ತೋರಿಸಲಾಗಿ ಅದನ್ನು ನಿಪಿ.2 ಎಂದು ಗುರುತಿಸಲಾಯಿತು. ನಿಪಿ.1 ಮತ್ತು 2 ರಲ್ಲಿರುವ ಅಂಶಗಳು ಗೊತ್ತಿದ್ದರೂ ಸಹ ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಕಂಪ್ಯೂಟರೀಕರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ. ಹೇ. ಕೇ. ಸರಿ. ಇದೆ.

ಸಹಿ/-
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಶಿರಾ.